ಶ್ರೀ ಕೆ. ಶ್ರೀರಾಮುಲು.—ಖಾನಗಿ ಕೈಗಾರಿಕೆಗಳಿಗೆ ಪವರಿಲ್ಲ ಎಂದು ಹೇಳುವಾಗ ಇಲ್ಲಿನ ನೌಕರರುಗಳಿಗೇಕೆ ಪುಕ್ಕಟೆಯಾಗಿ ಪವರನ್ನು ಕೊಡಬೇಕು ? ಇದನ್ನು ನಿಲ್ಲಿಸುವುದು ಸರಿಯಾಗಿರುತ್ತದಲ್ಲವೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ನೀತಿಯ ಪ್ರಶ್ನೆ. ಆದರೆ ಇದರಲ್ಲಿ ಪವರ್ ಕಟ್ ಎಲ್ಲರಿಗೂ ಅನ್ವಯವಾಗುವಂತೆ ಇವರಿಗೂ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಇರುವ ಶೇಕಡಾ 25 ರಷ್ಟು ಪವರ್ ಕಟ್‌ನ್ನು ಶೇಕಡಾ 35 ರವರೆಗೆ ಏರಿಸುತ್ತೀರಿ ಎನ್ನುವ ಸುದ್ದಿ ಕೇಳಿದೆವು. ಅಲ್ಲದೆ ತಮಿಳುನಾಡಿನ ಸರಕಾರ ಪವರು ಕಟ್ ಹೆಚ್ಚು ಮಾಡಿರುವಂತೆ ಇಲ್ಲೂ ಮಾಡುತ್ತಾರೆಂದು ಕೇಳುತ್ತೇವೆ. ಇದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಿಳುನಾಡಿನಂತೆ ಮಾಡುತ್ತಾರೆಂದು ಹೇಳುವುದು ಸುಳ್ಳು ಮತ್ತು ಶೇಕಡಾ 35 ರಷ್ಟು ಪವರು ಕಟ್ ಮಾಡುತ್ತೇವೆಂದು ಹೇಳುವುದೂ ಸರಿಯಲ್ಲ.

ಶ್ರೀ ಎಚ್. ಜಿ. ಚನ್ನಪ್ಪ.—ಹಾನ್ಸರ್ ವಿದ್ಯಾರ್ಥಿಗಳಿಗೆ ಪವರ್ ಕಟ್‌ಗಾಗಿ ವಿನಾಯಿತಿ ಕೊಟ್ಟಿರುವಂತೆ ಈಗ ಪರೀಕ್ಷಾ ಕಾಲವಾಗಿರುವುದರಿಂದ ಮನೆಗಳಲ್ಲಿರುವ ವಿದ್ಯಾರ್ಥಿಗಳಿಗೂ ದೀಪಗಳಿಲ್ಲದೆ ತೊಂದರೆಯಾಗುತ್ತಿದೆ, ಇವರಿಗೆ ಅನುಕೂಲವಾಗುವಂತೆ ಸರಕಾರ ಸಹಾಯ ಮಾಡಲು ಯೋಚಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಾಕ್ಟಿಕಲ್ ಆಗಿ ಇದು ಕಷ್ಟವಾಗುತ್ತದೆ. ಮತ್ತು ಎಲ್ಲರ ಮನೆಗಳಲ್ಲೂ ವಿದ್ಯಾರ್ಥಿಗಳಿರುವುದರಿಂದ ಇದರಲ್ಲಿ ನಿರ್ದಿಷ್ಟವಾಗಿ ಕೊಡುವುದು ಕಷ್ಟವಾಗುತ್ತದೆ, ತಾವು ಹೇಳುವ ಸಲಹೆ ಅವ್ಯಾಯಮಾನವಾಗಿದ್ದರೂ ಅದನ್ನು ಕಾರ್ಯಗತ ಮಾಡುವುದು ಕಷ್ಟ.

ಶ್ರೀ ಕೆ. ಶ್ರೀರಾಮುಲು.—ವಿದ್ಯುಚ್ಛಕ್ತಿ ಇರಾಖೆಯವರು ಎಂದು ಇವರು ಬೇಕಾದ ಹಾಗೆ ರೇಡಿಯೋ ಹಾಗೂ ಇತರ ಸಲಕರಣೆಗಳು ಇತ್ಯಾದಿಗಳಿಗೆ ಪವರನ್ನು ಪುಕ್ಕಟೆಯಾಗಿ ಪಡೆಯುವುದನ್ನು ತಪ್ಪಿಸಿ ಇದರಿಂದ ಬರುವ ಪವರನ್ನು ಕೈಗಾರಿಕೆಗಳಿಗೇ ಕೆ ಕೊಡಬಾರದು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ನೀತಿಯ ಪ್ರಶ್ನೆ, ಹಿಂದಿನಿಂದ ಅನುಸರಿಸಿಕೊಂಡು ಬರಲಾಗಿದೆ. ಈಗ ತಾವು ಸಲಹೆ ಮಾಡುತ್ತಿರುವುದರಿಂದ ಸರಕಾರ ಈ ವಿಷಯವನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಪರೀಕ್ಷಾ ಕಾಲವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಬೆಳಕಿನ ತೊಂದರೆಯಿರುವುದರಿಂದ ಇವರಿಗೂ ಕೂಡ ಸ್ವಲ್ಪ ಬೆಳಕನ್ನು ಕೊಡಲು ಉದಾರತೆಯಿಂದ ಪರಿಶೀಲಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿರ್ದಿಷ್ಟವಾಗಿ ಇದರ ಬಗ್ಗೆ ಯಾವ ನೀತಿಯೂ ಇಲ್ಲ.

Penalty on Extra Consumption of Electricity

597. Smt. WINNIFRED F. FERNANDES (Coondapur).—

Will the Minister for Public Works and Electricity be pleased to state :—

(*a*) whether it is a fact that since the imposition of the 25% cut on the consumption of electricity for any consumption above the limit fixed for a consumer the same is to be further deducted from his consumption during the succeeding months, in addition to his having to pay penalty on the extra consumption ;

(*b*) whether this is not [illegible]

(c) whether Government will be pleased to allow adjustment of units, less consumed by a consumer in any month against over consumption above his limit, in any subsequent month and/or give such consumer some bonus, for the less consumed units of power in a month ?

Sri H. M. CHANNABASAPPA (Minister for Public Works and Electricity).—

(a) Yes.

(b) No.

(c) No.

Smt. WINNIFRED F. FERNANDES.—In answer to (b) the reply is 'No'. How can the answer be 'No' when a person is penalised twice for a single offence ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಇದೇನೂ ಐ. ಪಿ. ಸಿ. ಕೋಡಿನಲ್ಲಿರುವಂತೆ ಆಫೆನ್ಸ್ ಆಗುವುದಿಲ್ಲ.

Smt. WINNIFRED F. FERNANDES.—If a person consumes more than the allotted units he has to pay penalty, and also in the next month he has to make good the excess units consumed. Will the Government consider and see that penalty is not levied in such cases ?

Sri H. M. CHANNABASAPPA.—It cannot be done.

ಶ್ರೀ ಎಂ. ಎಸ್. ಕೃಷ್ಣನ್.—ನೆರೆ ರಾಜ್ಯಗಳಲ್ಲಿ ಎಂದರೆ ತಮಿಳುನಾಡಿನಲ್ಲಿ ಪವರು ಕಟ್‌ನ್ನು ಶೇಕಡಾ 50—60 ರಷ್ಟು ಹೆಚ್ಚು ಮಾಡುತ್ತಾರೆಂದು ಕೇಳುತ್ತೇವೆ. ಅದೇ ರೀತಿ ಇಲ್ಲೂ ಹೆಚ್ಚು ಪವರ್ ಕಟ್ಟನ್ನು ಮಾಡಲು ಸರ್ಕಾರದವರು ಯೋಚಿಸುತ್ತಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೆರೆ ರಾಜ್ಯಗಳಲ್ಲಿ ಮಾಡುವಂತೆ ಇಲ್ಲಿ ಮಾಡುತ್ತಿಲ್ಲ. ಮುಂಜಾಗರೂಕತೆಯಿಂದ ನಮ್ಮ ರಾಜ್ಯ ಈಗಾಗಲೇ ಪವರ್ ಕಟ್ಟನ್ನು ಜಾರಿಗೆ ತಂದಿರುವುದರಿಂದ ನಮ್ಮ ರಾಜ್ಯದಲ್ಲಿ ಶೇಕಡಾ 25 ರಷ್ಟು ಮಾತ್ರ ಕಟ್ ಮಾಡರಾಗಿದೆ. ಇದನ್ನು ಇನ್ನು ಹೆಚ್ಚು ಮಾಡುವುದಿಲ್ಲ.

ಶ್ರೀ ಕೆ. ಬಿ. ಕೊಳೀವಾಡ.—ಐ. ಪಿ. ಸೆಟ್‌ಗಳಿಗೆ ಹಾಗೂ ಅಕ್ಕಿ ಗಿರಣಿಗಳಿಗೆ ತಾತ್ಕಾಲಿಕವಾಗಿಯಾದರೂ ಪವರು ಕಟ್ಟನ್ನು ಸಡಿಲ ಮಾಡಲು ಸಾಧ್ಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದಕ್ಕೆ ಸಾಧ್ಯ, ಹಾಗೂ ಇಲ್ಲ ಎನ್ನುವುದಕ್ಕೆ ಆವರ ಮನವಿಗಳು ಬಂದ ಮೇಲೆ ಅವಶ್ಯಕತೆ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ. ಮತ್ತು ಯಾವ ಆಶ್ವಾಸನೆಯನ್ನೂ ಕೊಡುವುದಕ್ಕಾಗುವುದಿಲ್ಲ.

Smt. WINNIFRED F. FERNANDES.—If a consumer has consumed less than his limit, will the Government allow him to consume the remaining units in the next succeeding month ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡರಾಗುವುದಿಲ್ಲ.